9-3-2013 ಉದಯವಾಣಿ
UDAYAVANI - MANIPAL



# ಡಿಜಿಟಲ್ ಲೈಬ್ರೆರಿ ಡಿಸೈನ್ ಡೆವಲಪ್‌ಮೆಂಟ್ ವಿಚಾರ ಸಂಕಿರಣ




ಬಂಟ್ವಾಳ, ಮಾ. 8: ಡಿಜಿಟಲ್ ಲೈಬ್ರೆರಿ ಡಿಸೈನ್ ಮತ್ತು ಡೆವಲಪ್‌ಮೆಂಟ್ ಕುರಿತು ಒಂದು ದಿನದ ವಿಶೇಷ ವಿಚಾರಸಂಕಿರಣ ದ.ಕ., ಉಡುಪಿ ಮತ್ತು ಕೊಡಗು ಗ್ರಂಥಾಲಯ ಅಸೋಸಿಯೇಶನ್ ಹಾಗೂ ಬಂಟ್ವಾಳ ಎಸ್‌ವಿಎಸ್ ಕಾಲೇಜಿನ ಆಶ್ರಯದಲ್ಲಿ ಕಾಲೇಜಿನಲ್ಲಿ ಮಾ. 8ರಂದು ನಡೆಯಿತು.

ಕಾಲೇಜಿನ ಕರೆಸ್ಪಾಂಡೆಂಟ್ ಭಾಮಿ ವಿಠಲದಾಸ ಶೆಣೈ ಅಧ್ಯಕ್ಷತೆ ವಹಿಸಿ ಶುಭ ಹಾರೈಸಿದರು. ಮಂಗಳೂರು ಆಸರೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಡಾ| ಆಶಾ ಜ್ಯೋತಿ ರೈ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಮಂಗಳೂರು ವಿ.ವಿ. ಗ್ರಂಥಪಾಲಕ ಡಾ| ಬಾಂದಿ ಎಂ.ಕೆ. ಮುಖ್ಯ ಭಾಷಣ ಮಾಡಿದರು. ಸಂಪನ್ಮೂಲ ವ್ಯಕ್ತಿ ಬೆಂಗಳೂರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್‌ನ ಡಾ| ಕ್ರಿಸ್ಟಿನಾ ಬಿರ್ದಿಲ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾಹಿತಿ ನೀಡಿದರು.

ಪ್ರಾಂಶುಪಾಲ ಡಾ| ಸೀತಾರಾಮ ಮಯ್ಯ ಸ್ವಾಗತಿಸಿದರು. ಅಸೋಸಿಯೇಶನ್ ಅಧ್ಯಕ್ಷೆ, ಶಿಬಿರ ಸಂಯೋಜಕಿ ಡಾ| ಸುಜಾತಾ ಎಚ್.ಆರ್. ಪ್ರಸ್ತಾವಿಸಿದರು. ಅಸೋಸಿಯೇಶನ್ ಕಾರ್ಯದರ್ಶಿ ಲೋಕನಾಥ ಪೂಜಾರಿ ವಂದಿಸಿದರು. ಡಾ| ರೇಖಾ ಪೈ ಕಾರ್ಯಕ್ರಮ ನಿರ್ವಹಿಸಿದರು.